ರೂಮ್‌ನ ಇನ್ನೊಂದು ತುದಿಯಲ್ಲಿ ಒಂದು ಬಾಗಿಲು. ಆ ಬಾಗಿಲ ಬಳಿ ಬಿದ್ದಿತ್ತು ವಿಶ್ವನಾಥ ರಾಯರ ಶವ. ಇಡೀ ದೇಹ ರಕ್ತದ ಮಡುವಿನಲ್ಲಿ ಮುಳುಗಿತ್ತು. ಅವರ ಕೈಲಿದ್ದ ಪಿಸ್ತೂಲ್ ಅವರು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬುದನ್ನು ತೋರುತ್ತಿತ್ತು.

"ಸರಿ ಶುರು ಹಚ್ಚಿಕೊಳ್ಳಿ" ಎಂದು ತನ್ನೊಂದಿಗೆ ಬಂದಿದ್ದ ಫೊರೆನ್ಸಿಕ್‌ವರಿಗೆ ಹೇಳಿ. ಮತ್ತೆ ಸುನೀಲ್ ಕಡೆ ತಿರುಗಿದ ನಾಗರಾಜಯ್ಯ, ''ಆತ್ಮಹತ್ಯೆ ಇರಬೇಕು ಅನಿಸುತ್ತದೆ. ನೋಡೋಣ. ಆ ಕೆಲಸದ ಹೆಂಗಸನ್ನು ಕರೀರಿ" ಎಂದ.

"ಸರ್ ಇದು ಆತ್ಮಹತ್ಯೆ ಅಲ್ಲ ಅನಿಸುತ್ತಿದೆ ಸಾರ್. ಆತ್ಮಹತ್ಯೆ ಮಾಡಿಕೊಂಡಿದ್ದರೆ ಈ ಬಾಗಿಲ ಬಳಿ ಬಂದು ಯಾಕೆ ಸಾಯುತ್ತಿದ್ದರು?'' ಎಂದು ಸುನೀಲ್ ಕೇಳಿದ.

"ಪಾಯಿಂಟ್ ಸರಿ ಇದೆ. ರೀ ನೀವೇನು ಪತ್ತೇದಾರಿ ಕಾದಂಬರಿ ಜಾಸ್ತಿ ಓದುತ್ತೀರಾ ಅಥವಾ ಪತ್ತೇದಾರರಾ" ಎಂದು ತನ್ನ ಬೋಳು ತಲೆಯನ್ನು ಸವರಿಕೊಳ್ಳುತ್ತಾ ಕೇಳಿದ ಇನ್‌ಸ್ಪೆಕ್ಟರ್.

"ಇಲ್ಲ, ನಾನು ಸಾಫ್ಟ್‌ವೇರ್ ಎಂಜಿನಿಯರ್."

ಅಷ್ಟರಲ್ಲಿ ಕಾನ್‌ಸ್ಟೆಬಲ್ ವಿಶಾಲಾಕ್ಷಮ್ಮನನ್ನು ಕರೆ ತಂದು "ಸಾರ್ ಬಂದ್ರು ನೋಡಿ'' ಎಂದು ತನ್ನ ಕೆಲಸಕ್ಕೆ ಹೊರಟ.

"ಹೇಳಮ್ಮ ಏನೇನು ಆಯಿತು ಅಂತ..."

ಇನ್‌ಸ್ಪೆಕ್ಟರ್ ವಿಶಾಲಾಕ್ಷಮ್ಮನೆಡೆ ತಿರುಗಿದ. ಸುಮಾರು 60– 65ರ ಹೆಂಗಸು. ಸೀರೆ ಉಟ್ಟಿದ್ದಾಳೆ. ಹಣೆ ಮೇಲೆ ಕಾಸಿನಗಲಿದ ಕುಂಕುಮ. ಕೆನ್ನೆಗೆ ಹಿಂದಿನ ದಿನ ಹಚ್ಚಿದ ಅರಿಸಿನ ಹಾಗೆಯೇ ಇದೆ. ಮನೆಯಲ್ಲಿ ನಡೆದ ಘಟನೆ ನೋಡಿ ಅತ್ತು ಅತ್ತು ಕಣ್ಣೆಲ್ಲ ಕೆಂಪಾಗಿದೆ. ಸಾವು ನೋಡಿದ ಭಯದಿಂದ ಇನ್ನೂ ಚೇತರಿಸಿಕೊಂಡಿರಲಿಲ್ಲ

''ಹೇಳಮ್ಮ ಬೇಗ ಬೇಗ'' ಅಸಮಾಧಾನದಿಂದ ಇನ್‌ಸ್ಪೆಕ್ಟರ್ ನಾಗರಾಜಯ್ಯ ಕೇಳಿದ.

''ಸಾಹೇಬರೆ ದಿನದಂತೆ ಬೆಳಗ್ಗೆ ಆರೂಕಾಲರ ಸುಮಾರಿಗೆ ಧಣಿಗಳಿಗೆ ಕಾಫಿ ಕೊಡಲು ಒಳಬಂದೆ. ಇಲ್ಲಿ ನೋಡಿದರೆ ಅವರು ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಕಿರುಚಿಕೊಂಡು ಓಡಿ ಬಂದೆ. ನಾನು ಕಿರುಚಿದ್ದು ಕೇಳಿ ಎಲ್ಲರೂ ಓಡಿ ಬಂದರು, ಅಷ್ಟೆ ಸಾಹೇಬರೆ."

"ಸರಿ ಮತ್ತೆ ಕರೀತೀನಿ, ಹೋಗಿ ಎಲ್ಲರಿಗೂ ಕಾಫಿ ಮಾಡಿಕೊಂಡು ಬಾ."

"ಸರ್, ಇಲ್ಲಿ ಒಂದು ಕೊಲೆ ಆಗಿದೆ. ನಾವೆಲ್ಲ ಅದರ ದುಃಖದಲ್ಲಿ ಇದ್ದೇವೆ. ನೀವು ಕಾಫಿ ಕೇಳ್ತಿದ್ದೀರಲ್ಲ'' ಸುನೀಲ್ ಸ್ವಲ್ಪ ಅಸಮಾಧಾನದಿಂದಲೇ ನುಡಿದ.

"ನೋಡ್ರೀ, ನಿಮಗೆ ಇದು ಮೊದಲಿನದು. ನಮಗೆ ಇದು ಪ್ರತಿದಿನದ ಕತೆ. ನಾನು ಮುಂದಿನ ತಿಂಗಳು ರಿಟೈರ್ ಆಗುತ್ತಿದ್ದೇನೆ. ನನ್ನ ಸರ್ವೀಸಿನಲ್ಲಿ ಇದು ಎಷ್ಟನೆಯದೋ. ಅರವತ್ತಕ್ಕೂ ಹೆಚ್ಚುಕೊಲೆ ಪ್ರಕರಣ ಭೇದಿಸಿದ್ದೇನೆ" ಎಂದ ಬೋಳು ತಲೆ ಸವರಿಕೊಳ್ಳುತ್ತ. ಮತ್ತೆ ಅಂದ ''ಇದೇನು ಆತ್ಮಹತ್ಯೆನಾ? ನೋಡಕ್ಕೆ ಹಾಗೇ ಕಾಣುತ್ತೆ?"

ಅವನ ಮಾತುಗಳನ್ನು ತಡೆಯುತ್ತಾ ''ಸಾರ್ ಅವಾಗಲೇ ಹೇಳಿದೆನಲ್ಲಾ ಇದು ಕೊಲೆ ಸಾರ್. ಆತ್ಮಹತ್ಯೆ ಮಾಡಿಕೊಳ್ಳುವವರು ಬಾಗಿಲ ಬಳಿ ಮಾಡಿಕೊಳ್ಳುತ್ತಾರಾ? ಬೆಡ್ ಅಥವಾ ಕುರ್ಚಿ ಮೇಲೆ ಮಾಡಿಕೊಳ್ಳುತ್ತಾರಲ್ಲವಾ? ಬೇಸಿಕ್ ಇನ್ವೆಸ್ಟಿಗೇಶನ್ ಪ್ರೊಸೀಜರ್ ಸಹಿತಾ ಫಾಲೋ ಮಾಡುತ್ತಿಲ್ಲ ನೀವು" ಅವನ ಮಾತುಗಳಲ್ಲಿ ಅದೇನೋ ಅವಸರ, ಅಸಮಾಧಾನ ಇತ್ತು.

"ನೀವೇನು ತುಂಬಾ ಪತ್ತೇದಾರಿ ಕಾದಂಬರಿ ಓದುತ್ತೀರಾ? ನೀವು ಹೇಳೋದೂ ಕರೆಕ್ಟ್ ನೋಡಿ."